ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) 100 ಹಾಸಿಗೆಗಳಿಗೆ ಬೇಕಾಗುವ ಅಗತ್ಯ ಸಿಬ್ಬಂದಿಗಳನ್ನು ನಿಯಮಾನುಸಾರ ಮಂಜೂರು ಮಾಡಲಾಗಿದೆ. ಅದರಂತೆ, ಸದರಿ ಆಸ್ಪತ್ರೆಗೆ 11 ವೈದ್ಯರ ಹುದ್ದೆ ಮಂಜೂರಾಗಿದ್ದು, 9 ವೈದ್ಯರು ಕರ್ತವ್ಯನಿರ್ವಹಿಸುತ್ತಿದ್ದಾರೆ. ವೈದ್ಯೇತರ ಹುದ್ದೆಯಲ್ಲಿ 64 ಹುದ್ದೆಗಳು ಮಂಜೂರಾಗಿದ್ದು, 44 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಖಾಲಿ ಇರುವ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

1116 (1615) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಪ್ರೌಢಶಾಲೆಗಳಲ್ಲಿ ಕ.ಸ.ಸೇ. ನಿಯಮ 32ರಂತೆ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯೋಪಾಧ್ಯಾಯರ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ;

ಆ) ಇವರುಗಳು ಈ ಹುದ್ದೆಯಲ್ಲಿ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ;

ಇ) ಇವರಿಗೆ ಸ್ಥಾನಪನ್ನ (Officiating) ಬಡ್ತಿಯನ್ನು ನೀಡದೇ ಇರುವುದಕ್ಕೆ ಕಾರಣವೇನು ;

ಈ) ಬಡ್ತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವಾಗ ಬಡ್ತಿ ನೀಡಲಾಗುವುದು ;

ಉ) ಬಡ್ತಿಯ ವಿಳಂಬದಿಂದ ನಿವೃತ್ತಿ ಹೊಂದಿದ ಮತ್ತು ಬಡ್ತಿ ಪಡೆಯಲಿರುವವರಿಗೆ ಆಗುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 696.

ಜಿಲ್ಲಾವಾರು ಹಾಗೂ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ಲಗತ್ತಿಸಿದೆ.

ಆ) 3–4 ವರ್ಷಗಳಿಂದ.

ಇ) ದಿನಾಂಕ: 5.1.2005ರಂದು ಕೆ.ಸಿ.ಎಸ್.ಆರ್. ನಿಯಮ 32ರ ಅಡಿ ಕಾರ್ಯನಿರ್ವಹಿಸುತ್ತಿರುವ 241 ಮುಖ್ಯ ಶಿಕ್ಷಕರುಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಶಿಫಾರಸ್ಸು ಮಾಡಿದೆ. ಆರ್ಥಿಕ ಮಿತವ್ಯಯ ಆದೇಶ ಸಡಿಲಿಕೆಯ ನಂತರ ಸ್ಥಾನಪನ್ನ ಪದೋನ್ನತಿ ಆದೇಶ ಹೊರಡಿಸಲಾಗುವುದು.

ಈ) ಬಡ್ತಿ ಅವಕಾಶ ಸಿಗದೇ ಇರುವವರುಗಳಿಗೆ ಒಂದೇ ಹುದ್ದೆಯಲ್ಲಿ 10.15 ಹಾಗೂ 20 ವರ್ಷಗಳ ಸೇವೆ ಸಲ್ಲಿಸಿರುವವರಿಗೆ, ಕಾಲಬದ್ಧ ಮುಂಬಡ್ತಿ ಹಾಗೂ ಸ್ವಯಂಚಾಲಿತ ವೇತನ ಬಡ್ತಿ ನೀಡಲಾಗುತ್ತಿದೆ.